ಕಬಿನಿ ೨ನೇ ಹಂತದ ಯೋಜನೆ

೧೯೫. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಬಿನಿ ೨ನೇ ಹಂತದ ಯೋಜನೆಯನ್ನು ಪ್ರಾರಂಭಿಸಲಾಗುವುದೇ?

ಆ) ಹಾಗಿದ್ದಲ್ಲಿ, ಈ ಯೋಜನೆಗೆ ಕೇಂದ್ರದ ಅನುಮತಿ ದೊರೆತಿದೆಯೇ?

ಇ) ಈ ಯೋಜನೆಯಲ್ಲಿ ಮುಳುಗಡೆಯಾಗುವ ಜಮೀನಿನಿಂದ ರೈತರಿಗೆ ಬೇರೆ ಜಮೀನು ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಬಿನಿ ೨ನೇ ಹಂತದ ಯೋಜನೆ ಇನ್ನೂ ವಿಪರವಾದ ಸಮೀಕ್ಷೆ ಹಂತದಲ್ಲಿದೆ.

ಆ) ಕಾವೇರಿ ಕೊಳ್ಳದ ನೀರಿನ ಹಂಚಿಕೆ ಬಗ್ಗೆ ಅಂತರರಾಜ್ಯ ಸಮಸ್ಯೆ ಇರುವ ಕಾರಣ ಪ್ರಗತಿಯಲ್ಲಿರುವ ಹಾಗೂ ಹೊಸ ಯೋಜನೆಗಳಿಗೆ ಕೇಂದ್ರದ ಅನುಮತಿ ದೊರೆತಿಲ್ಲ.

ಇ) ಈ ಯೋಜನೆಯು ಅನುಷ್ಠಾನಕ್ಕೆ ಬಂದ ನಂತರ ಈ ಯೋಜನೆಯಲ್ಲಿ ಮುಳುಗಡೆ ಆಗುವ ಜಮೀನಿನ ರೈತರಿಗೆ ಸೂಕ್ತ ಪರಿಹಾರ ಕ್ರಮವನ್ನು ಕಾನೂನಿನ ಮೇರೆಗೆ ತೆಗೆದುಕೊಳ್ಳಲಾಗುವುದು.

ತಾರಕ ಯೋಜನೆಗೆ ಖರ್ಚು ಮಾಡಿರುವ ಹಣ

೧೯೬. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡ ದೇವನ ಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರಕ ನೀರಾವರಿ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಆ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನು ನೀರಾವರಿಯಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೯೦ರ ಮಾರ್ಚ್ ೯೦ರ ಅಂತ್ಯದ ವೇಳೆಗೆ ಒಟ್ಟು ೧೨೫೫ ಲಕ್ಷ ರೂ.ಗಳಷ್ಟು ವ್ಯಯ ಮಾಡಲಾಗಿದೆ.

ಆ) ಅಂತಿಮವಾಗಿ ೭೦೪೦ ಹೆಕ್ಟೇರುಗಳು.

ಯು. ಕೆ. ಪಿ. ನಾರಾಯಣಪುರದಲ್ಲಿ ಮುಳುಗಡೆ ಆದ ಪ್ರದೇಶದಲ್ಲಿ ಏತ ನೀರಾವರಿ ಪ್ರಾರಂಭಿಸುವ ಬಗ್ಗೆ

೨೦೭. ಶ್ರೀ ಎಸ್. ನಾಡಗೌಡ (ಮುದ್ದೇಬಿಹಾಳ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯು.ಕೆ.ಪಿ. ನಾರಾಯಣಪುರದಲ್ಲಿ ಬರುವಂತಹ ಮುಳುಗಡೆಯ ಪ್ರದೇಶದಲ್ಲಿ ಸರ್ಕಾರವು ಏತ ನೀರಾವರಿ ಯೋಜನೆಗಳನ್ನು ಹಮ್ಮಿಕೊಂಡಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಯೋಜನೆಗಳ ಅಂದಾಜು ಮಾಡಲಾಗಿದೆ ?

ಇ) ಈ ಯೋಜನೆಗಳಿಗೆ ತಗಲುವ ಅಂದಾಜು ವೆಚ್ಚ ಎಷ್ಟು ? ಹಾಗೂ ಎಷ್ಟು ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಇಟ್ಟು ಕೊಳ್ಳಲಾಗಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ಹೌದು.

ಆ) ನಾರಾಯಣಪುರ ಜಲಾಶಯ (ಬಸವ ಸಾಗರ) ದಿಂದ ಒಂದು ಏತ ನೀರಾವರಿ ಯೋಜನೆಯನ್ನು ಕೃಷ್ಣಾಮೇಲ್ದಂಡೆ ಯೋಜನೆಯ ಎರಡನೆಯ ಘಟ್ಟದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಇದು ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಇ) ಉದ್ಭವಿಸುವುದಿಲ್ಲ.